# ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜೊತೆಗೆ ಪ್ರಧಾನಿಯ ಸಭೆ

ಡಿಸೆಂಬ್ 01, 2023

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 1 ಡಿಸೆಂಬರ್ 2023 ರಂದು ದುಬೈನಲ್ಲಿ COP 28 ಶೃಂಗಸಭೆಯ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ (UNSG) ಹೆಚ್ ಇ ಶ್ರೀ ಆಂಟೋನಿಯೊ ಗುಟೆರೆಸ್ ಅವರನ್ನು ಭೇಟಿಯಾದರು.

ಭಾರತದ G20 ಅಧ್ಯಕ್ಷತೆಯ ಅವಧಿಯಲ್ಲಿ UNSG ಯ ಬೆಂಬಲಕ್ಕಾಗಿ ಪ್ರಧಾನಮಂತ್ರಿ ಧನ್ಯವಾದಗಳನ್ನು ಅರ್ಪಿಸಿದರು. ಹವಾಮಾನ ಗುರಿಗಳನ್ನು ತಲುಪುವುದಕ್ಕೆ ಭಾರತದ ಉಪಕ್ರಮಗಳು ಮತ್ತು ಪ್ರಗತಿಯನ್ನು ಅವರು ಎತ್ತಿ ತೋರಿಸಿದರು.

ಯುಎನ್ ಸೇರಿದಂತೆ ಬಹುಪಕ್ಷೀಯ ಆಡಳಿತ ಮತ್ತು ಹಣಕಾಸು ಸಂಸ್ಥೆಗಳ ಹವಾಮಾನ ಕ್ರಮ, ಹವಾಮಾನ ಹಣಕಾಸು, ತಂತ್ರಜ್ಞಾನ ಮತ್ತು ಸುಧಾರಣೆಗಳಿಗೆ ಸಂಬಂಧಿಸಿದ ಜಾಗತಿಕ ದಕ್ಷಿಣದ ಸಮಸ್ಯೆಗಳು ಮತ್ತು ಆದ್ಯತೆಗಳ ಕುರಿತು ಇಬ್ಬರೂ ನಾಯಕರು ಅಭಿಪ್ರಾಯಗಳನ್ನು ಹಂಚಿಕೊಂಡರು.

ವಿಶ್ವಸಂಸ್ಥೆಯ  ಪ್ರಧಾನ ಕಾರ್ಯದರ್ಶಿಯವರು ಸುಸ್ಥಿರ ಅಭಿವೃದ್ಧಿ, ಹವಾಮಾನ ಕ್ರಮ, ಎಂಡಿಬಿ ಸುಧಾರಣೆಗಳು ಮತ್ತು ಜಿ20 ಪ್ರೆಸಿಡೆನ್ಸಿ ಅಡಿಯಲ್ಲಿ ಆಪತ್ತು ನಿರ್ವಹಣೆಯ ಕ್ಷೇತ್ರಗಳಲ್ಲಿ ಭಾರತದ ಪ್ರಯತ್ನಗಳನ್ನು ಮೆಚ್ಚಿದರು. ಪ್ರಧಾನಮಂತ್ರಿಯವರ ಗ್ರೀನ್ ಕ್ರೆಡಿಟ್ ಉಪಕ್ರಮವನ್ನು ಅವರು ಸ್ವಾಗತಿಸಿದರು. ಭಾರತದ ಅಧ್ಯಕ್ಷತೆಯ ಸಾಧನೆಗಳ ಮೇಲೆ ಇನ್ನಷ್ಟು ನಿರ್ಮಿಸಲು ಮತ್ತು ಭವಿಷ್ಯದ 2024 ರ ವಿಶ್ವ ಸಂಸ್ಥೆಯಲ್ಲಿ ನಡೆಯುವ  ಶೃಂಗಸಭೆಯು ಅವುಗಳನ್ನು ಮುಂದಕ್ಕೆ ಕೊಂಡೊಯ್ಯಲು ಅವರು ಭಾರತದೊಂದಿಗೆ ಕೆಲಸ ಮಾಡಲು ದೃಢಪಡಿಸಿದರು.

ದುಬೈ
**ಡಿಸೆಂಬರ್ 01, 2023**